# ಶಿಶುನಾಳ ಶರೀಫರ ತತ್ತ್ವಪದಗಳು

ನಾಗೇಶ್ ರಾವ್ ಎಲ್.ಜಿ.

ಕನ್ನಡನಾಡಿನ ಸಂತ ಶಿಶುನಾಳ ಶರೀಫರ ಭಾವಪೂರ್ಣವಾದ, ಅರ್ಥಗರ್ಭಿತವಾದ ತತ್ತ್ವಪದಗಳು ಅತ್ಯಂತ ಜನಪ್ರಿಯವಾಗಿವೆ. ಗಾಢ ಆಧ್ಯಾತ್ಮಿಕ ಭಾವಗಳಿಂದ ತುಂಬಿರುವ ಈ ಹಾಡುಗಳ ಹಿಂದೆ ಅಗಾಧವಾದ ಜೀವನಾನುಭವವಿದೆ. ಈ ಕುರಿತು ಬರೆದಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಅವರು ಬೆಂಗಳೂರು ಆಶ್ರಮದ ಭಕ್ತರು; ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಪ್ರಸ್ತುತ ಅವರು ಮೈಸೂರಿನಲ್ಲಿ ವಾಸವಾಗಿದ್ದಾರೆ.

ದಾಸ ಸಾಹಿತ್ಯದಂತೆಯೇ ಜನಜೀವನವನ್ನು ಮುಟ್ಟಿ ಹಸನಗೊಳಿಸಲು ಕಾರಣವಾದ ಇನ್ನೊಂದು ಬಗೆಯ ಹಾಡುಗಳು ಕನ್ನಡ ಸಾಹಿತ್ಯದಲ್ಲಿವೆ. ಇವುಗಳನ್ನು ಬರೆದವರು ಶರಣ ಮಾರ್ಗಾವಲಂಬಿಗಳಾದ ಅನುಭಾವಿಗಳು. ಅವರು ಅಂತರಂಗದ ಅರಿವನ್ನು ನಿರೂಪಿಸುವುದರ ಕಡೆಗೆ ಮತ್ತು ಅನುಭಾವದ ಪ್ರತಿಪಾದನೆಗೆ ಹೆಚ್ಚು ಗಮನ ಕೊಟ್ಟವರು. ಇವರ ಹಾಡುಗಳನ್ನು ''ತತ್ತ್ವ ಪದಗಳು'' ಎಂದು ಕರೆದಿರುತ್ತಾರೆ.

ಈ ಪರಂಪರೆಯಲ್ಲಿ ನಿಜಗುಣ ಶಿವಯೋಗಿಗಳು, ಮುಪ್ಪಿನ ಷಡಕ್ಷರಿ, ಚಿದಾನಂದ ಅವಧೂತರು, ಸರ್ಪಭೂಷಣ ಶಿವಯೋಗಿಗಳು, ಶಂಕರಾನಂದರು, ಬಾಲಲೀಲಾ ಮಹಂತ ಶಿವಯೋಗಿ, ಶಿಶುನಾಳ ಶರೀಫ ಸಾಹೇಬರು ಬರುತ್ತಾರೆ. ಸರ್ವಜ್ಞನೂ ಇದೇ ಪರಂಪರೆಗೆ ಸೇರುತ್ತಾನೆ.

ಸೂಫಿ ಸಂತರ ಸಂದೇಶಗಳು, ಶಿವಶರಣರ ವಚನಗಳು, ತತ್ತ್ವಪದಕಾರ ಸಂತರ ಒಡನಾಟ ಮತ್ತು ಗುರುಗೋವಿಂದ ಭಟ್ಟರ ಮಾರ್ಗದರ್ಶನ–ಇವು ಶಿಶುನಾಳ ಷರೀಫರ ವ್ಯಕ್ತಿತ್ವವನ್ನು ರೂಪಿಸಿದವು.

ಶಿಶುನಾಳ ಶರೀಫರ (ಕ್ರಿ.ಶ ೧೮೧೯–೧೮೮೯) ಪದಗಳು ಭಾವಗೀತೆಯ ಎಲ್ಲ ಲಕ್ಷಣಗಳನ್ನೂ ಹೊಂದಿವೆ. ಗೇಯತೆ, ಸಂಕ್ಷಿಪ್ತತೆ, ಸ್ವಾಂತತೆ ಮತ್ತು ಚಿರಂತನತೆಯನ್ನು ಈ ಪದಗಳಲ್ಲಿ ಕಾಣಬಹುದು.

## ಪ್ರಸಂಗಾವಧಾನ ಮತ್ತು ಆಶುಕವಿತೆ

'ಸೂಜಿಯೇ ನೀನು ಸೂಜಿಯೇ', 'ಗಿರಣಿ ವಿಸ್ತಾರ ನೋಡಮ್ಮ', 'ಬಿದ್ದೀಯಬ್ಬೆ ಮುದುಕಿ ಬಿದ್ದೀಯಬ್ಬೆ', 'ಅಳಬೇಡ ತಂಗಿ ಅಳಬೇಡ' – ಮೊದಲಾದ ಪದಗಳಲ್ಲಿ ಷರೀಫರ ಪ್ರಸಂಗಾವಧಾನ ಮತ್ತು ಆಶುಕವಿತೆಯನ್ನು ಕಾಣಬಹುದು. ಒಂದೆರಡು ಪದಗಳ ಅರ್ಥ ವಿವರಣೆಯನ್ನು ತಿಳಿಯೋಣ.

ಅಳಬೇಡ ತಂಗಿ ಅಳಬೇಡ
ನಿನ್ನ ಕಳುಹ ಬಂದವರಾರು ಉಳಿಸಿ ಕೊಂಬವರಿಲ್ಲ ॥ ಪ ॥
ಖಡಕೀಲಿ ಉಡಿಯಿಕ್ಕಿ ಹಾಕಿದರವ್ವಾ । ಒಳ್ಳೆ
ದುಡಿಕೀಲೆ ಮುಂದಕ್ಕೆ ನೂಕಿದರವ್ವಾ
ಮಿಡಿಕ್ಯಾಡಿ ಮದುವ್ಯಾದಿ ಮೋಜು ಕಣವ್ವಾ । ಮುಂದ



ಹುಡುಕಾಡಿ ಮಾಯದ ಮರವೇರಿದವ್ವಾ ।
ಅಳಬೇಡ ॥ ೧ ॥

ರಂಗೀಲಿ ಉಟ್ಟದಿ ರೇಷ್ಮೆ ಧಡಿ ಸೀರೆ । ಮತ್ತ
ಹಂಗನೂಲಿನ ಪರವಿ ಮರೆತಿವ್ವಾ ನಾರಿ
ಮಂಗಳ ಮೂರುತಿ ಶಿಶುನಾಳಧೀಶನ
ಅಂಗಳಕ ನೀ ಹೊರತಾದೆವ್ವಾ ಗೌರೀ । ಅಳಬೇಡ ॥ ೨ ॥

ಒಬ್ಬ ಹುಡುಗಿ ಮದುವೆಯಾಗಿ ಗಂಡನ ಮನೆಗೆ ಹೊರಟು ನಿಂತಿದ್ದಾಳೆ, ಆಕೆಯ ಅಣ್ಣನೇ ಎತ್ತಿನ ಬಂಡಿ ತಯಾರು ಮಾಡಿದ್ದಾನೆ. ಆಕೆ ತಾಯಿ ತಂದೆಯರನ್ನು ಬೀಳ್ಕೊಡುವ ದೃಶ್ಯ. ಸಹಜವಾಗಿ ಎಲ್ಲರ ಕಣ್ಣಿನಲ್ಲೂ ನೀರು. ಈ ದೃಶ್ಯವನ್ನು ಶಿಶುನಾಳ ಶರೀಫರು ನೋಡುತ್ತಾರೆ. ಪ್ರಸಂಗಾವಧಾನಿಯಾದ ಆಶು ಕವಿಯಾದ ಅವರು ಹಾಡುತ್ತಾರೆ. 'ನೀನೇ ಮಿಡಿಕ್ಯಾಡಿ ಮದುವೆಯಾದೆ. ಹೊಸ ರೇಷ್ಮೆ ಸೀರೆ ಉಟ್ಟುಕೊಂಡೆ. ನಿನಗೆ ಆತುರದಿಂದ ಉಡಿಯನ್ನು ತುಂಬಿದರು. ಚಿಕ್ಕ ವಯಸ್ಸಿಗೆ ನಿನ್ನನ್ನು ಸಂಸಾರಕ್ಕೆ

ನೂಕಿದರು. ಮಾಯದ ಮರವೇರಿದೆ. ಈಗ ಈ ಬಂಧನದಿಂದ, ಗಂಡನ ಮನೆಯಿಂದ ತಪ್ಪಿಸಿಕೊಳ್ಳಲಾರೆ. ಅಳಬೇಡ, ತಂಗೀ ಅಳಬೇಡ. ಶಿಶುನಾಳಾಧೀಶನ ಅಂಗಳಕೆ ಅಧ್ಯಾತ್ಮ ಜೀವನಕ್ಕೆ ಹೊರತಾದೆ. ಈಗ ನೀನು ಅಸಹಾಯಕಳು. ಅಳಬೇಡ ತಂಗೀ.. ...' ಈ ಪದ ಶರೀಫರ ಆಧ್ಯಾತ್ಮಿಕ ನಿಲುವನ್ನು ತಿಳಿಸುತ್ತದೆ.

ಇನ್ನೊಂದು ಪದ ನೋಡೋಣ:

ಹಾವ ತುಳಿದೇನೇನೆ ಮಾನಿನಿ ಹಾವ ತುಳಿದೇನೇ ॥ಪ॥
ಹಾವ ತುಳಿದು ಹಾರಿನಿಂತೆ
ಜೀವ ಕಳವಳಿಸಿತೇ ಗೆಳತಿ
ದೇಹತ್ರಯದ ಸ್ಮೃತಿಯು ತಪ್ಪಿ
ದೇವಾ ನೀನೆ ಗತಿಯು ಎಂದು । ಹಾವ ॥೧॥
ಹರಿಗೆ ಹಾಸಿಗೆಯಾದ ಹಾವು
ಹರನ ತೋಳಿನೊಳಿರುವ ಹಾವು
ಧರೆಯ ಹೊತ್ತು ಮೆರೆವ ಹಾವು
ಶಿರವ ಮೆಟ್ಟಿ ಶಿವನ ದಯದಿ . . . .ಹಾವ ॥೨॥
ಕಾರಡಿಯ ಊರ ಹೊರಗೆ
ದಾರಿ ಕಟ್ಟಿ ತರುಬಿದಂಥ
ಘೋರತರದ ಉರಗ ಅದರ
ಕ್ಷಾರಿಹಲ್ಲು ಮುರಿವ ತೆರದಿ . . . . .ಹಾವ. . . ॥೩॥
ಸತ್ಯ ಶಿಶುನಾಳಾಧೀಶನ ಉತ್ತಮದ ಸೇವಕನಿಗೆ
ಕತ್ತಲೊಳು ಬಂದು ಕಾಲಿಗೆ
ಸುತ್ತಿಕೊಂಡಿತು ಸಣ್ಣನಾಗರ . . . .ಹಾವ ॥೪॥

ಇದು ತುಂಬ ಜನಪ್ರಿಯವಾದ ಪದ. ಇದು ಶರೀಫರಿಗೆ ಉಂಟಾದ ಅನುಭವದ ಕಥನ. ತನಗೆ ಹುಟ್ಟಿದ ಮಗು ಬಾಣಂತಿಯಾಗಿದ್ದ ಹೆಂಡತಿ ಇಬ್ಬರನ್ನೂ ಒಮ್ಮೆಲೆ ಕಳೆದುಕೊಳ್ಳುತ್ತಾರೆ. ಆಗ ಅವರಿಗಿನ್ನೂ ಹರೆಯ. ಅವರಿಗೆ ಶಾಲಾಮಾಸ್ತರರ ಕೆಲಸವೂ ಇತ್ತು. ಸ್ವಲ್ಪ ಭೂಮಿ ಕಾಣಿ ಇತ್ತು. ಗುರುಗೋವಿಂದರ ಭೇಟಿಯಾದ ಮೇಲೆ ಮನಸ್ಸು ಸಂಪೂರ್ಣ ವೈರಾಗ್ಯದ ಕಡೆ ತಿರುಗಿತು. ಅವರು ಶಿವಯೋಗಿಯಾದರು. ಆದರೆ ಈ ಸುಂದರ ತರುಣನನ್ನು ಮೋಹಿಸಿ ಬಂದ ತರುಣಿಗೆ ಅವರು ಕೊಟ್ಟ ಕಾವ್ಯಾತ್ಮಕ ಪ್ರತಿಕ್ರಿಯೆ ಈ ಪದವಾಗಿದೆ. ಇಡೀ ಪ್ರಸಂಗದ ಅನುಭವ ಮತ್ತು ತಿಳುವಳಿಕೆ ಮನನೀಯವಾದುದು. ಲೈಂಗಿಕ ಪಿಪಾಸೆ ನೀಗಿದ, ವೈರಾಗ್ಯವನ್ನು ತ್ರಿಕರಣಪೂರ್ವಕ ಆಚರಿಸುವ ಕವಿ ಶರೀಫರು. ಆ ತರುಣಿಯನ್ನು ಮಾನಿನಿಯೆಂದು ಗೌರವಿಸುತ್ತಾರೆ. ಹಾವು ಲೈಂಗಿಕತೆಯ ಸಂಕೇತ. ಅದನ್ನು ತಾನಾಗಲೇ ತುಳಿದು ಹಾಕಿದ್ದಾಗಿದೆ. ಅಂದರೆ ದಮನ ಮಾಡಿದ್ದಾಗಿದೆ. ಆದರೆ ಹಾವು ಪುರಾಣದ ಪ್ರಕಾರ ಅಸಾಮಾನ್ಯ ಜೀವ, ಅದು ಹರಿಗೆ ಹಾಸಿಗೆಯಾಗಿದೆ. ಹರನ ಕೊರಳಿಗೆ ಆಭರಣವಾಗಿದೆ. ಅದು ತುಚ್ಛವಾದುದಲ್ಲ. ಅವರು ಈ ವೈರುಧ್ಯವನ್ನು ಸಮೀಕರಿಸುತ್ತಾರೆ. ಹಾವಿನ ಸಂಕೇತದ ಎರಡೂ ಮುಖಗಳನ್ನು ಪರಿಭಾವಿಸುವ ಶರೀಫರ ಕಲ್ಪನೆ ಸುಂದರವಾಗಿದೆ. ಇದೊಂದು ಸುಂದರ ಭಾವ ಗೀತೆ ಹಾಗೂ ತತ್ತ್ವಪದ.

ಗುರುಗೋವಿಂದ ಭಟ್ಟರು ಜಡವಿಚಾರಗಳಿಗೆ ಹೊರತಾಗಿದ್ದು, ಭೌತಿಕ ವ್ಯವಸ್ಥೆಯ ದ್ವಂದ್ವಾತ್ಮಕ ಸ್ವರೂಪವನ್ನು ಕಂಡವರು. 'ಬೋಧವೊಂದೆ ಬ್ರಹ್ಮನಾದವೊಂದೆ' ಎಂಬುದನ್ನು ಅನುಭವಿಸಿದವರು. ಬಯಲು ಆಲಯ, ಸತ್ಯ-ಲೀಲೆಗಳ ಸಂಬಂಧವನ್ನು ಅರಿತವರು. ವ್ಯಕ್ತಿಯ ಅಂತಃಶ್ರೀಯ ಬಗ್ಗೆ ಪುರಸ್ಕಾರವಿತ್ತು. ಇಂತಹ ನಿರಂಜನಸ್ವರೂಪಿ ಗುರು ಶರೀಫನಿಗೆ ದೊರಕಿದರು. ಆಗ ಶರೀಫರಿಗೆ ೧೬-೧೮ ವರ್ಷವಿರಬೇಕು. ಅವರಿಗೆ ಮೂರು ಎಳೆ ಜನಿವಾರವನ್ನು ಹಾಕಿ, ಗಾಯತ್ರಿ ಮಂತ್ರದ ಉಪದೇಶ ಮಾಡಿದರು. ಅದು ನಿಜವಾದ ಉಪನಯನ ಸಂಸ್ಕಾರವಾಯಿತು. 'ಹಾಕಿದ ಜನಿವಾರವ' ಎಂದು ಹಾಡಿದರು. ಶರೀಫರು ಧರಿಸಿದ ಯಜ್ಞೋಪವೀತ ಅವರನ್ನು ಕರ್ಮಲತೆಯಾಗಿ ಬಂಧಿಸಲಿಲ್ಲ. ಅವರಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳು ಮೈದಾಳಿದವು, ಹೀಗೆ ಅವರು ದ್ವಿಜತ್ವವನ್ನು ಸಂಪಾದಿಸಿಕೊಂಡರು.

ತತ್ತ್ವಪದಗಳ ಮೂಲ ಉದ್ದೇಶ ಲೋಕಸಂಗ್ರಹ. ಶರೀಫರಿಗೆ ಗುರುಗೋವಿಂದರು ವೈಯಕ್ತಿಕ ಮುಕ್ತಿಯ ಜೊತೆಗೆ ಸಾತ್ವಿಕ ಮನೋಧರ್ಮದಿಂದ ಅಂದಿನ ಕಂಪೆನಿ ಆಡಳಿತದ ಅರಾಜಕತೆ, ಅವಮಾನೀಯ ವ್ಯವಸ್ಥೆಯನ್ನು ಎದುರಿಸುವ ಮನೋಬಲವನ್ನು ಜನರಿಗೆ ತಿಳಿಸಬೇಕಾಗಿತ್ತು. ಆತ್ಮಗೌರವದ ಬದುಕಿಗೆ ಬೇಕಾದ ಜ್ಞಾನವನ್ನೂ, ಆತ್ಮಸ್ಥೈರ್ಯವನ್ನೂ ಕೊಡುವ ತತ್ತ್ವಪದಗಳ ಆವಶ್ಯಕತೆಯಿತ್ತು. ಒಳಗಿನ ಶತ್ರುವನ್ನು ಎದುರಿಸಲು ಹಸನಾದ ಪದಗಳು ಬೇಕಾಗಿತ್ತು. ಶಿಶುನಾಳ ಶರೀಫರು ಇದಕ್ಕೆ ಬೇಕಾದ ತತ್ತ್ವಪದಗಳನ್ನು ಹಾಡಿದರು.

ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಸನಾತನ ಧರ್ಮವು ಸಂಕಷ್ಟಕ್ಕೆ ಒಳಗಾಗಿತು. ಬಂಗಾಳದ ವಿದ್ಯಾವಂತ ಯುವಜನತೆ ಬ್ರಹ್ಮಸಮಾಜದ ಪ್ರಭಾವಕ್ಕೆ ಒಳಗಾಗಿದ್ದಿತು, ಪಶ್ಚಿಮದಲ್ಲಿ ದಯಾನಂದ ಸರಸ್ವತಿಯವರ ಆರ್ಯ ಸಮಾಜವು ಮೂರ್ತಿಪೂಜೆಯನ್ನು ನಿರಾಕರಿಸುತ್ತಿತ್ತು, ಭಕ್ತಿವೇದಾಂತದ ಮತ ಪಂಥಗಳ ಪಂಡಿತರು ತರ್ಕವಾದಗಳಲ್ಲಿ ನಿರತರಾಗಿದ್ದರು. ಇದರಿಂದ ಸಾಮಾನ್ಯ ಜನರಿಗೆ ಯಾವ ಪ್ರಯೋಜನವೂ ಆಗಲಿಲ್ಲ. ಸಮಾಜದಲ್ಲಿ ಅಸಮಾನತೆ, ಅಸ್ಪೃಶ್ಯತೆ, ಮೂಢನಂಬಿಕೆಗಳು ತಾಂಡವವಾಡುತ್ತಿದ್ದವು. ಇಂತಹ ಸಂಕಷ್ಟದ ಸಮಯದಲ್ಲಿ ಶ್ರೀರಾಮಕೃಷ್ಣರು ಅವತರಿಸಿ, ಸನಾತನ ಧರ್ಮದ ದಿವ್ಯತೆ, ಶ್ರೇಷ್ಠತೆ ಮತ್ತು ವೈಶಾಲ್ಯತೆಗಳನ್ನು ಘಂಟಾಘೋಷವಾಗಿ ಸಾರಿದರು. ಯೋಗ್ಯರಾದ ಅವರ ಶಿಷ್ಯರು ಸಮಾನತೆ ಮತ್ತು ಸಮನ್ವಯದ ಸಂದೇಶಗಳನ್ನು ದೇಶವಿದೇಶಗಳಲ್ಲಿ ಹರಡಿದರು. ಧರ್ಮಸಂಸ್ಥಾಪನೆಯಾಯಿತು. ಇದನ್ನು ಇಲ್ಲಿ ನೆನೆಯುವುದು ಅನುಚಿತವೆನಿಸದು.

''ನನ್ನೊಳಗ ನಾ ತಿಳಕೊಂಡೆ, ನನಗೆ ಬೇಕಾದ ಗಂಡನ್ನ ಮಾಡಿ ಕೊಂಡೆ''. ಇದು ರಾಜಕುಮಾರಿಯ ಸ್ವಯಂವರದಂತಲ್ಲ. ಒಬ್ಬ ಸಾಧಕ ತನಗೆ ಬೇಕಾದ ಗುರುವನ್ನು ಇಷ್ಟದೇವತೆಯನ್ನು ಹುಡುಕಿ ಕೊಳ್ಳುವ ಪ್ರಕ್ರಿಯೆ. ''ಎಲ್ಲಾರ ಹಂಗನ್ನು ಕಳಕೊಂಡೆ. ಗುರುವಿನ ಆಜ್ಞಾಪ್ರಕಾರ ನಡೆದುಕೊಂಡೆ'' ಎಂದು ಹಾಡುತ್ತಾರೆ.

ಶಿವನ ಹಾದಿಯ ಬೇಡಿಕೊಂಡೆ
ಗುರೂಪದೇಶವ ಪಡಕೊಂಡೆ
ಈ ಭವಕ್ಕ ಬಾರದ್ಹಾಂಗ ಮಾಡಿಕೊಂಡೆ
ಗುರುಗೋವಿಂದನ ಪಾದ ಹಿಡಕೊಂಡೆ

ಇದು ಶಿಶುನಾಳ ಶರೀಫರು ತಮ್ಮ ಗುರುಗಳಲ್ಲಿ ಇಟ್ಟಿದ್ದ ಅನನ್ಯ ಭಕ್ತಿಯನ್ನೂ ಅಪಾರ ಶ್ರದ್ಧೆಯನ್ನೂ ತಿಳಿಸುತ್ತದೆ; 'ಕೋಡಗನ್ನ ಕೋಳಿ ನುಂಗಿತ್ತಾ' 'ಬರ ಕೋಪದ ಬರಕೊ', 'ಹಾಕಿದ ಜನಿವಾರವ' ಮೊದಲಾದ ಪದಗಳಲ್ಲಿಯೂ ಇದು ಕಾಣಬರುತ್ತದೆ.

ಇಂತಹ ಉತ್ಕೃಷ್ಟವಾದ ಗುರುಭಕ್ತಿ ಮತ್ತು ಶ್ರದ್ಧೆಗಳನ್ನು ಶ್ರೀರಾಮಕೃಷ್ಣರ ಶಿಷ್ಯರಲ್ಲೂ ಕಾಣುತ್ತೇವೆ.

''ಶಿಶುನಾಳ ಶರೀಫರು ನುಡಿದುದೆಲ್ಲ ಅನುಭಾವ. ಅವರು ಹಾಡಿದುದೆಲ್ಲ ಆಧ್ಯಾತ್ಮವಾಯಿತು. ಪದಗಳ ವಿನ್ಯಾಸ, ಪ್ರಾಸದ ಸೊಗಸು, ಭಾವದ ವಿಲಾಸ, ಕಲ್ಪನಾಚಾತುರ್ಯ, ಅನುಭವದ ಆಳ–ಇವೆಲ್ಲವುಗಳ ಸಂಗಮ ಇವರ ಗೀತೆಗಳಲ್ಲಿದೆ.'' ಎಂದು ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರು ಹೇಳಿದ್ದಾರೆ.


*ಆಕರ ಗ್ರಂಥಗಳು:*

*೧) **ಬೋಧವೊಂದೆ ಬ್ರಹ್ಮನಾದವೊಂದೆ,** ಶ್ಯಾಮಸುಂದರ ಬಿದರಕುಂದಿ., ಕ.ಸಾ.ಪ.*

*೨) **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಡಾ. ಹೆಚ್. ತಿಪ್ಪೇರುದ್ರ ಸ್ವಾಮಿ.*


**ಯುವಚೇತನ**

## ಕರ್ಮಯೋಗದ ಮಹತ್ತ್ವ



ಕರ್ಮಯೋಗ ಎಂದರೇನು? ಅದು ಕರ್ಮರಹಸ್ಯದ ಜ್ಞಾನ. ಇಡೀ ವಿಶ್ವವೇ ಕರ್ಮಮಾಡುವುದನ್ನು ನಾವು ನೋಡುತ್ತೇವಷ್ಟೆ. ಅದು ಹಾಗೆ ಮಾಡುವುದು ಏತಕ್ಕೋಸ್ಕರ? ಮುಕ್ತಿ ಪ್ರಾಪ್ತಿಗಾಗಿ, ಸ್ವಾತಂತ್ರ್ಯ ಪ್ರಾಪ್ತಿಗಾಗಿ, ತಿಳಿದೋ ತಿಳಿಯದೆಯೋ ಯಥಾರ್ಥವಾಗಿಯೋ, ಬಲು ಸಣ್ಣದಾದ ಪರಮಾಣು ಮೊದಲುಗೊಂಡು ಅತ್ಯಂತ ಮಹತ್ತಾದುದರವರೆಗೆ ಪ್ರತಿಯೊಂದೂ ಅದಕ್ಕಾಗಿಯೇ ಕರ್ಮ ಮಾಡುತ್ತವೆ. ಅವೆಲ್ಲವೂ ಮನಸ್ಸು, ದೇಹ, ಆತ್ಮ ಇವುಗಳಿಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವ ಒಂದೇ ಒಂದು ಉದ್ದೇಶದಿಂದ ಕರ್ಮಮಾಡುತ್ತಿವೆ. ಸಂಕ್ಷೇಪವಾಗಿ ಹೇಳುವುದಾದರೆ, ಈ ಉಪಾಧಿಬದ್ಧವಾದ ಜೀವನದಿಂದ ತಪ್ಪಿಸಿಕೊಂಡು ಪರಮ ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ ಸಮಸ್ತ ಭೂತಗಳೂ ಸತತವೂ ಪ್ರಯತ್ನಪಡುತ್ತಿವೆ. ಸೂರ್ಯ, ಚಂದ್ರ, ಭೂಮಿ, ಗ್ರಹಗಳು ಇವೆಲ್ಲವೂ ಆ ಬಂಧನದಿಂದ ಬಿಡಿಸಿಕೊಳ್ಳಲು ಓಡುತ್ತಿವೆ. ಕೇಂದ್ರಾಪಗಾಮಿ, ಕೇಂದ್ರಾಭಿಗಾಮಿ ಶಕ್ತಿಗಳೆರಡೂ ಈ ವಿಶ್ವದಲ್ಲಿ ಕೆಲಸಮಾಡುತ್ತಿರುವುದನ್ನು ನಾವು ನೋಡುತ್ತೇವೆ. ಈ ಪ್ರಪಂಚದಲ್ಲಿ ಪೇಚಾಡಿ, ದೀರ್ಘ ಕಾಲ ಪೆಟ್ಟು ತಿಂದನಂತರ ಪದಾರ್ಥಗಳ ನಿಜಸ್ಥಿತಿಯನ್ನು ಅರಿಯುವುದಕ್ಕೆ ಬದಲಾಗಿ, ಯಾವುದರಿಂದ, ನಾವು ಸುಲಭವಾಗಿಯೂ ನಿಸ್ಸಂದೇಹವಾಗಿಯೂ ಅದನ್ನು ಅರಿಯಲಾಗುವುದೋ ಆ ಕರ್ಮರಹಸ್ಯವನ್ನೂ, ಕರ್ಮದ ವಿಧಾನವನ್ನೂ ಕರ್ಮಯೋಗವು ತಿಳಿಸುತ್ತದೆ. ಅದು ಆ ಕರ್ಮದ ವ್ಯವಸ್ಥಾಶಕ್ತಿಯನ್ನೂ ಬೋಧಿಸುತ್ತದೆ. ನಮ್ಮ ಅಗಾಧವಾದ ಶಕ್ತಿಯ ಬಹುಭಾಗವು, ನಮಗೆ ಅದನ್ನು ಸರಿಯಾಗಿ ಬಳಸುವ ವಿಧಾನವು ತಿಳಿಯದೇ ಹೋದರೆ, ವ್ಯರ್ಥವಾಗಿ ಹೋಗಬಹುದು. ಕರ್ಮಯೋಗವು ಕರ್ಮವನ್ನು ಒಂದು ವೈಜ್ಞಾನಿಕ ವಿಧಾನವನ್ನಾಗಿ ಪರಿವರ್ತಿಸುತ್ತದೆ. ಈ ಪ್ರಾಪಂಚಿಕ ವ್ಯಾಪಾರಗಳನ್ನು ಅತ್ಯಂತ ಲಾಭಕರವಾಗಿ ಹೇಗೆ ನಾವು ಉಪಯೋಗಿಸಿಕೊಳ್ಳಬಹುದೆಂಬುದನ್ನು ಅದರಿಂದ ನಾವು ಕಲಿತುಕೊಳ್ಳುತ್ತೇವೆ. ನಮ್ಮಲ್ಲಿ ಪ್ರತಿಯೊಬ್ಬನೂ ಕರ್ಮವನ್ನುಮಾಡಬೇಕಾದುದು ಅಪರಿಹಾರ್ಯವಾಗಿರುವಾಗ, ನಾವು ಅತ್ಯಂತ ಉಚ್ಚವಾದ ಉದ್ದೇಶಗಳ ಪ್ರಾಪ್ತಿಗಾಗಿ ಕರ್ಮಮಾಡಬಹುದು. ಪ್ರಪಂಚ ಕ್ಷಣಿಕವಾದದ್ದು, ಅದರಲ್ಲಿ ನಮ್ಮ ಯಾತ್ರೆ ಅಪರಿಹಾರ್ಯವಾದುದು, ಮುಕ್ತಿಲಾಭವು ಈ ಪ್ರಪಂಚದಲ್ಲಲ್ಲ, ಅದರಾಚೆ ಎಂಬುದನ್ನು ನಾವು ಒಪ್ಪಿಕೊಳ್ಳುವಂತೆ ಮಾಡುತ್ತದೆ, ಕರ್ಮಯೋಗ. ಈ ಜಗತ್ತಿನ ಬಂಧನದಿಂದ ಪಾರಾಗಲು ನಾವು ನಿಧಾನವಾಗಿ, ಆದರೆ ನಿಶ್ಚಿತವಾಗಿ ಜಗತ್ತಿನ ಮೂಲಕವೇ ಹಾದು ಹೋಗಬೇಕು. ಹಾವು ತನ್ನ ಪೊರೆಯನ್ನು ಬಿಟ್ಟು ಮಗ್ಗುಲಲ್ಲಿ ನಿಂತು ಅದನ್ನು ನೋಡುವಂತೆ, ಕೊಂಚವೂ ಹಿಂಜರಿಯದೆ ಪ್ರಪಂಚವನ್ನು ಬಿಟ್ಟು ಪೃಥಕ್ಕಾಗಿ ನಿಂತುಕೊಳ್ಳತಕ್ಕಂತಹ ಅಸಾಮಾನ್ಯ ಮನುಷ್ಯರು ಕೆಲವರಿರಬಹುದು. ಆದರೆ ಉಳಿದವರು ಕರ್ಮ ಪ್ರಪಂಚದಲ್ಲಿ ನಡೆದು ಹೋಗಲೇಬೇಕು. ಕರ್ಮಯೋಗವು ಸಕಲರ ಲಾಭಕ್ಕಾಗಿ ಕರ್ಮರಹಸ್ಯವನ್ನೂ ಕರ್ಮ ಮಾಡುವ ವಿಧಾನವನ್ನೂ ತೋರಿಸಿಕೊಡುತ್ತದೆ.

ಅದು ಹೇಳುವುದೇನು? 'ಕರ್ಮಾಸಕ್ತಿಯನ್ನು ಬಿಟ್ಟುಬಿಟ್ಟು ಅವಿರತವಾಗಿ ಕರ್ಮಮಾಡು.' ಯಾವುದರೊಡನೆಯೂ ಕಲೆತು ಒಂದಾಗಬೇಡ, ನಿನ್ನ ಮನಸ್ಸನ್ನು ಮುಕ್ತವಾಗಿಟ್ಟುಕೊಂಡಿರು. ಈ ಜೀವನದ ವ್ಯಥೆಗಳನ್ನೂ , ಕೇಶಗಳನ್ನೂ ಈ ಪ್ರಪಂಚದ ಅನಿವಾರ್ಯ ಸ್ಥಿತಿಗಳೆಂದು ಭಾವಿಸಿಕೊಂಡು, ಅವುಗಳನ್ನು ಅನಾಯಾಸವಾಗಿ ಸಹಿಸಿಕೊಳ್ಳಬೇಕೆಂದೂ, ಈ ಪ್ರಪಂಚದ ದಾರಿ, ಸಂಪತ್ತು, ಸುಖ ಅವೆಲ್ಲವೂ ಕ್ಷಣಿಕವಾದುವೆಂದೂ, ಅವು ನಮ್ಮ ಯಥಾರ್ಥ ಪ್ರಕೃತಿಗೆ ಸಂಬಂಧ ಪಟ್ಟವಲ್ಲವೆಂದೂ ಕರ್ಮಯೋಗ ಬೋಧಿಸುತ್ತದೆ.

— ಸ್ವಾಮಿ ವಿವೇಕಾನಂದ (*'ಕರ್ಮಯೋಗ', ಪು.೯೪*)